dc-6078
T-P-4

Regd No B G 182 ಗೋಮಾತಾಕೀ ಜೈ Monthly Jai Gomata December 1972 ಡಿಸೆಂಬರ್

ಗೋರಕ್ಷಣಕ್ಕೆ ಲೇಖನ ಕೊಡು
ತ್ತಿರುವವರಿಗೆ, ನೆರವು (ಡೊನೇರ್ಷ)
ನೀಡುತ್ತಿರುವವರಿಗೆ, ಪ್ರಚಾರಮಾಡು
ತ್ತಿರುವವರಿಗೆ ವಂದನೆಗಳು
ಅನೇಕ ಪ್ರತಿಗಳು ಉಚಿತವಾಗಿ
ಹಂಚಲಾಗುತ್ತಿದೆ
ವಾರ್ಷಿಕಚಂದಾ ಅಂಚೆಮೂಲ್ಯ 80ಪೈಸೆ
ವಿನಂತಿ– ಸಕಲರೀತಿಯಲ್ಲೂ ನೆರವುನೀಡಿ

ವರ್ಷ 23 rd Year

ಗೋರಕ್ಷಣ
GORAKSHANA

Office– 1067 Chamarajapuram. Mysore 4
ಸಂಪಾದಕರು : ಧರ್ಮಪ್ರಚಾರನಿರತ ಎಂ.ಎಸ್. ಕೃಷ್ಣರಾವ್

Please help in every way
This Humanitarian
– Propaganda Paper –
Many Papers Distributed Free
ಗೋರಕ್ಷಣ, ಅಹಿಂಸಾ
ಪ್ರಚಾರ ಪತ್ರಿಕೆ
ದೇಶದಾದ್ಯಂತ ಗೋವಧೆ ಕೂಡಲೆ ನಿಲ್ಲಲಿ

ಬಿಡಿ ಪ್ರತಿ 5 ಪೈಸೆ

Cow Slaughter should be banned Immediately

Kannada version of the A ticle– " Were cow-sl ughter, meat-sacrifice and meat-eating prevalent in Vedic times ? " –
From " A Review of Beef in Ancient India "
Compiled by Syt J Dalmiaji

ಗೋಹತ್ಯ, ಪ್ರಾಣಿಬಲಿ ಮತ್ತು ಮಾಂಸಾಹಾರ ವೇದಕಾಲದಲ್ಲಿ ರೂಢಿಯಲ್ಲಿತ್ತೆ ?

(ಮುಂದುವರಿದುದು).

ವೇದದ ಮುಖ್ಯ ತತ್ವ

ವೇದದ ಮುಖ್ಯ ತತ್ವವು ಎಲ್ಲಾ ಪ್ರಾಣಿಗಳನ್ನೂ ಮೈತ್ರೀಯ ಸಹಾನುಭೂತಿಯಿಂದ ಕಾಣತಕ್ಕುದು ಎಂದಾಗಿದೆ. ಆದುದರಿಂದ, ಎಲ್ಲಾ ಪ್ರಾಣಿಗಳನ್ನೂ ಮೈತ್ರೀಯ ಪ್ರೇಮದಿಂದ ಕಾಣುವಂಥವರು ತಮ್ಮ ಹೊಟ್ಟೆಗಾಗಿ ಹೇಗೆ ಇತರರನ್ನು ಹತ್ಯ ಮಾಡುವರು ? ಮೈತ್ರಿಯ ಪ್ರೇಮವು ತನ್ನ ಜೀವನವನ್ನು ಇತರರ ಒಳ್ಳಿತಕ್ಕಾಗಿ ಸಮರ್ಪಿಸುವುದಕ್ಕೆ ಮಾರ್ಗದರ್ಶಕವಾಗಿದೆ ಮತ್ತು ಪ್ರಿತಿಸಲ್ಪಟ್ಟುದು ತಮ್ಮ ಹೊಟ್ಟೆಗಾಗಿ ವಧಿಸಲ್ಪಡುವುದು ಅಸಾಧ್ಯವು. ವೇದದ ಮುಖ್ಯ ತತ್ವವು ಈಕೆಳಗೆ ನಮೂದಿಸುವುದರ ದೂಲ್ಕ ಉದಾಹರಿಸಲ್ಪಟ್ಟಿದೆ :

1. ಮಿತ್ರಸ್ಯ ಮಾ ಚಕ್ಷುಷಾ ಸರ್ವಾಣಿ ಭೂತಾನಿ ಸಮೀಕ್ಷಂತಾಂ ।
ಎಲ್ಲಾ ಪ್ರಾಣಿಗಳೂ ನನ್ನನ್ನು ಮಿತ್ರ ದೃಷ್ಟಿಯಿಂದ ನೋಡಲಿ.
ಮಿತ್ರಸ್ಯಾಹಂ ಚಕ್ಷುಷಾ ಸರ್ವಾಣಿ ಭೂತಾನಿ ಸಮೀಕ್ಷೆ ।
ನಾನು ಎಲ್ಲಾ ಪ್ರಾಣಿಗಳನ್ನೂ ಮಿತ್ರನ ದೃಷ್ಟಿಯಿಂದ ನೋಡುತ್ತೇನೆ.
ಮಿತ್ರಸ್ಯ ಚಕ್ಷುಷಾ ಸಮೀಕ್ಷಾಮಹೆ
ನಾವು ಪರಸ್ಪರ ಮಿತ್ರರ ದೃಷ್ಟಿಯಿಂದ ನೋಡುತ್ತೇವೆ.
ವಾಜಸನೇಹಿ–ಸಂಹಿತ 4 9 27

2. ಮಿತ್ರಸ್ಯ ವಃ ಚಕ್ಷುಷಾ ಸಮೀಕ್ಷಧ್ವಂ
ಎಲ್ಲಪನ್ನೂ ಮಿತ್ರನ ದೃಷ್ಟಿಯಿಂದ ನೋಡು (ಮೈತ್ರಾಯಿಣಿ ಸಂಹಿತೆ 4.9 27)

3. ಪ್ರಿಯಃ ಪಶೂನಾಂ ಭೂಯಾಸಂ
ನಾನು ಎಲ್ಲ ಪ್ರಾಣಿಗಳಿಗೂ ಪ್ರಿಯವಾಗಿರಲಿ. (ಅಥರ್ವವೇದ 17.1.4)

4. ದೃತೇರ್ದೃಂಹಮಾಮಿತ್ರಸ್ಯಮಾ ಚಕ್ಷುಷಾ ಸರ್ವಾಣಿ ಭೂತಾನಿ ಸಮೀಕ್ಷಂತಾಂ
ಮಿತ್ರಸ್ಯಾಹಂ ಚಕ್ಷುಷಾ ಸರ್ವಾಣಿ ಭೂತಾನಿ ಸಮೀಕ್ಷೆ
ಮಿತ್ರಸ್ಯ ಚಕ್ಷುಷಾ ಸಮೀಕ್ಷಾಮಹೆ ।

ಓ ಎಲ್ಲಾ ಯಾತನ ಮತ್ತು ಅಜ್ಞಾನಗಳನ್ನು ಓಡಿಸುವವನೆ ! ನನ್ನನ್ನು ಬಲಪಡಿಸು ; ಎಲ್ಲಾ ಪ್ರಾಣಿಗಳೂ ನನ್ನನ್ನು ಮೈತ್ರಿ ದೃಷ್ಟಿಯಿಂದ ನೋಡುವಂತಾಗಲಿ ; ನಾನು ಎಲ್ಲಾ ಪ್ರಾಣಿಗಳನ್ನೂ ಮೈತ್ರಿ ದೃಷ್ಟಿಯಿಂದ ನೋಡುವಂತಾಗಲಿ : ನಾವು ಪರಸ್ಪರ ಮೈತ್ರಿಭಾವದಿಂದ ಕಾಣುವಂತಾಗಲಿ. (ಯಜುರ್ವೇದ 36.18)

[ಮುಂದುವರಿಯುವುದು

ಪಶುವಧೆಗೆ ಪ್ರೋತ್ಸಾಹವೇ ?

★

ಗೋಮಾತೆಯನ್ನು ಚುನಾವಣೆ ಲಾಂಛನವನ್ನಾಗಿ ತೋರಿಸಿ ಒಂದಿರಾ ಕಾಂಗ್ರೆಸಿಗರು ಮಾತೆಯರ ಮತಗಳಿಂದಾಗಿ ಅಧಿಕ ಸ್ಥಾನಗಳನ್ನು ಪಡೆದು ಅಧಿಕಾರ ಗದ್ದಿಗೆಯನ್ನೇರಿರುವುದಾಗಿ ಹೇಳಲಾಗುತ್ತಿದೆ. ಕಾಂಗ್ರೆಸಿಗರು ಈ ಲಾಂಛನವನ್ನು ಮಾಂಸ ಮಾರಾಟದಂಗಡಿಗಳ ಗುರುತನ್ನಾಗಿ ಉಪಯೋಗಿಸಿಕೊಂಡರೋ ಅನ್ನುವ ಮಾತು ಕೇಳಿಬರುವ ಘಟನೆ ಸಂಭವಿಸಿರುತ್ತದೆ. ಲೋಕಸಭೆಯಲ್ಲಿ ಭಾರತೀಯ ಜನಸಂಘದ ಸದಸ್ಯರೊಬ್ಬರು ಪಶುವಧೆ ಪಶುವಧೆ ಪ್ರತಿಬಂಧಿಸುವ ತೀರ್ಮಾನ ತರಲು ವಿಷಯ ಮಂಡಿಸಿದರು. ಆದರ ಮೇಲೆ ವಾದ–ಪ್ರತಿವಾದ ನಡೆಯಿತು ಅದು ಪಾರ್ಲಿಮೆಂಟಿಗೆ ಸೇರಿದ ವಿಷಯವಲ್ಲ, ರದ್ದಜ್ಯಗಳಿಗೆ ಸಂಬಂಧಿಸಿದ ವಿಷಯವೆಂದುಬಿಟ್ಟರು ಕೃಷಿ ಮಂತ್ರಿ ಶೇರ್ ಸಿಂಗ್. ಹಿಂದೆ ಒಂದು ರಾಜ್ಯವು ಅಂತಹ ಕಾನೂನನ್ನು ತಂದಾಗ ಅದನ್ನು ನ್ಯಾಯಾಲಯವು ತಪ್ಪಿಂದಿರುವದನ್ನು ಮರೆಯುವದೆಂತು ?। ಹಾಗಾದಲ್ಲಿ ಇದು ರಾಜ್ಯಕ್ಕೂ ಸಂಬಂಧಪಟ್ಟದ್ದಲ್ಲ, ಪಾರ್ಲಿಮೆಂಟಿಗೂ ಸಂಬಂಧ ಪಟ್ಟದ್ದಲ್ಲ– ಕೇವಲ ಗೋಮಾತೆಗೆ ಸಂಬಂಧಪಟ್ಟಿದ್ದೇನು ? ಆಕೆ ಮತದಾರಳಾಗಿ ಬಂದಾಗ ಈ ಪ್ರಶ್ನೆ ಬಗೆಹರಿಯಬಹುದು.

ಅಧಿಕಾರಾರೂಢ ಮುಖಂಡರು ನಿರ್ಮಿಸಿರುವ ಸಮಿತಿ ವರ್ಗೈರೆ ಭಾರತೀಯರ ಕಣ್ಣಿಗೆ ಮಣ್ಣೆರಚಲಿಕ್ಕಾಗಿ ಇದೆ ; ಇಲ್ಲವಾದಲ್ಲಿ ಕಾಂಗ್ರೆಸ್ ಆಡಳಿತ ಇರುವ ಎಲ್ಲಾ ರಾಜ್ಯಗಳಲ್ಲೂ ಗೋಹತ್ಯೆ ಪ್ರತಿಬಂಧಕ ಕಾನೂನು ಜಾರಿಗೆ ಬರುತ್ತಿತ್ತು.

ಪ್ರಜೆಗಳ ಬಹುದಿನಗಳ ಬೇಡಿಕೆ ನೆರವೇರುವಂತೆ ಕೂಡಲೇ ಕಾನೂನು ಜಾರಿಗೆ ಬರಲಿ : ಪಶುವಧೆ ನಿಲ್ಲಲಿ ; ಗೋರಕ್ಷಣೆ ಹೆಚ್ಚಾಗಲಿ. — ಶಿವಶಂಕರ

★

Cow-slaughter N.R.S

(Contined from last Issue)

Recently a sapient Chief Minister has declared that we would have no famine if we could eat rats, snakes, lizards, birds and all animals and of course cattle, as Chinese do

Stupid man ! He does not know that China has been plagued by famine often enough in the past (I saw a reference in the Statesman ' 75 year ago column some years back). The Chinese were then as omnivorous as at present and if there are no famines now the credit must go to Communism and not and not omnivorousness

In 1921 [early twenties Gandhiji, Acharya Prafulla Chandra and another person were going to Khulna. Seeing the cattle on either side Prafulla Chandra said ' What good are these cattle for ? Worthless ! Worthless ! In the Vedas we find cattle were killed for yajna and eaten " : Gandhiji kept quiet for time and said " if that is so then the rishis probably realised that beef eating was bad for humanity and they stopped beef eating in the Puranas.

Who knows how much of the present violence all over India is causod by the increasing tempo of cow–slaughter.

ಗೋ ರ್.....ಬ್ರಾ ಹ್ಮ ಣ

ಲೇಖಕ— ಹೊಂಗನೂರು ಅನಂತಕೃಷ್ಣ ಜೋಯಿಸ್

(ಮುಂದುವರಿದುದು)

ಪತ್ನಿಯ ವಾಗ್ವೈಖರಿಯನ್ನು ಕಂಡು ಜೋಯಿಸರು ನಕ್ಕು ನುಡಿದರು— " ಹಾಗಂದ್ರೆ ಹ್ಯಾಗೆ ? ನಾಳೆ ದಿವಸ ನಮ್ಮ ಮಕ್ಕಳು ನಮ್ಮನ್ನು ನೋಡಿ ಕಲಿಯೋದಿಲ್ಲ, ಅಕ್ಕಪಕ್ಕದವರನ್ನು ಕಲೀತಾರೆ ; ಅಂದರೆ, ಹೊರಗಿನ ವಾತಾವರಣಕ್ಕೆ ಅವು ಹೊಂದಿಕೊಂಡಿರಬೇಕಾಗುತ್ತೆ ; ವಾತಾವರಣ ಕುಲಿಶಿತಗೊಂಡಿದ್ದರೆ ? ಈ ಗ್ಲೋ ನೋಡು ನಿನ್ನ ಮಗ ಏನೆಂದ. ನಾವಿಷ್ಟು ಯೋಚನೆ ಮಾಡುತ್ತಾ ಇದ್ದರೆ " ಈ ಕಾಲವೇ ಹೀಗೆ ನೀನ್ಯಾಕೆ ಯೋಚ್ನೆ ಮಾಡ್ತೀಕು " ಅಂತಂದ. ತಮ್ಮಿಂದಲೇ ತಾವು ಕೆಟ್ಟು ಕಾಲದ ಮೇಲೆ ತಪ್ಪನ್ನು ಹೊರಿಸಿ ತಾನು ತಲೆ ಕೊಡವಿಕ್ಕೊಳ್ಳದೆ ಮನುಷ್ಯನ " ಧರ್ಮ " ವಾಗಿ ಹೋಗಿದೆ. ಸಮಾಜ ಒಂದು ಶರೀರ ಇದ್ದಹಾಗೆ, ವ್ಯಕ್ತಿ ಅದರ ಅಂಗ ಹಾಗೂ ಪ್ರತ್ಯಂಗ. ಅಂದಮೇಲೆ ವ್ಯಕ್ತಿಗಳ ಒಕ್ಕೂಟವೇ ಸಮಾಜ : ವ್ಯಕ್ತಿ ಸಮಾಜಬಾಹಿರನಾಗಲು ಸಾಧ್ಯವಿಲ್ಲ. ಅಂತೆಯೇ ಯಾವ ವ್ಯಕ್ತಿ ಧರ್ಮಬಾಹಿರನಾದರೂ ಸಮಾಜದ ಒಂದು ಅಂಗ ಊನವಾದಂತೆಯೆ ; ಅದನ್ನು ಸರಿಪಡಿಸುವುದೇ ಮಿಕ್ಕೆಲ್ಲ ಅಂಗಗಳ ಕರ್ತವ್ಯ ; ಆದುದರಿಂದ ಪ್ರತಿಯೊಬ್ಬ ವ್ಯಕ್ತಿಯನ್ನು ತಿದ್ದುವುದು ಪ್ರತಿಯೊಬ್ಬ ವ್ಯಕ್ತಿಯ ಕರ್ತವ್ಯ. ಇದನ್ನರಿಯದೆ ನಮ್ಮ ಪಾಡಿಗೆ ನಾವಿದ್ದರೆ ನಮ್ಮ ಧರ್ಮ, ಸಂಸ್ಕೃತಿ, ಎಲ್ಲವೂ ವಿನಾಶದ ಹಾದಿ ಹಿಡಿಯಲಾರದೆ ? "

ನಲ್ವತ್ತು ವರ್ಷಗಳಿಂದ ಜೋಯಿಸರೊಡನೆ ಸಂಸಾರ ನಡೆಸಿದ ವೈದೇಹಿಗೆ ಈಗ ಜೋಯಿಸರ ವಿಶಾಲದೃಷ್ಟಿ ಅರಿವಾಯಿತು. ಪತಿಯು ಧರ್ಮಾಭಿಮಾನ, ದೇಶ ಭಕ್ತಿ ಮುಗಿಲಿಗಿಲ್ಲ ಎಕೆ ? ಎಂಬುದಕ್ಕೆ ಈಗ ಉತ್ತರ ದೊರೆತಂತಾಯಿತು. ಆದೇ ಸಂಸ್ಕಾರ : ಸಂಸ್ಕಾರ ಹೊಂದಿದ ಅಂದರೆ ಸಂಸ್ಕೃತ ವಾತಾವರಣ ಅವನಿಗೆ ದೊರೆಯದೇ ಹೋದುದೇ ಅವನ ಈ ಮನೋಭಾವನೆಗೆ ಕಾರಣನೆಂದು ಅರಿವಾಯಿತು. ಛತ್ರಪತ್ರಿ ಶಿವಾಜಿಗೆ ಸಂಸ್ಕಾರ ದೊರೆತುದುದು ಅವನ ತಾಯಿಯಿಂದಲೇ ಅಲ್ಲವೇ ?

ಸಾಧ್ವಿಯಾದ ಆಕೆ ಪತಿಯನ್ನೇ ಈ ರೀತಿ ಪ್ರಶ್ನಿಸಿದಳು— " ಅದು ಸರಿ : ನೀವು ಹೇಳಿದ್ದು ಎಲ್ಲರೂ ಒಪ್ಪತಕ್ಕ ಮಾತು : ಆದು ಇದು ಇಂದಿನ ಪೀಳಿಗೆಗೆ ಹಿಡಿಸಬಲ್ಲದೆ ? ಕೋಟಿಕೋಟಿ ಜನರ ಹೃದಯಡಲ್ಲಿ ಇದೇಭಾವನೆ ಬೆಳೆಯಬೇಡವೇ? "

ಪತ್ನಿಯ ಬುದ್ಧಿವಂತಿಕೆಗೆ ತಲೆದೂಗಿದ ಜೋಯಿಸರು ಕ್ಷಣಕಾಲ ಚಿಂತಿಸಿ—

" ವೈದೇಹಿ, ನನ್ನಬೊಂದು ಆಲೋಚನೆ : ಬೇಕಾದಷ್ಟು ಮುದಿ ಹಸುಗಳನ್ನು ಕಟುಕರಿಗೆ ಕೊಡೋದಕ್ಕೆ ಸಂತೇಗೆ ಹೊಡೀತಾರಲ್ವೆ ? "

" ಹೌದು "

' ಅದನ್ನೆಲ್ಲಾ ನಾವೇ ಕೊಂಡುಕೊಳ್ಳೋದು "

' ಅಂದರೆ ? "

' ನಮ್ಮ ಕಣ್ಣಿಗೆ ಆ ರೀತಿ ಬಿದ್ದ ಹಸುಗಳನ್ನು ಕೊಂಡುಕೊಂಡು ಅವುಗಳ ಪೋಷಣೆ ನೋಡಿಕೊಳ್ಳೋದು "

" ಆದಕ್ಕೆಲ್ಲಾ ಹಣ ? ಜಾಗ ? "

: ಮನೆಯ ಹಿಂದೆ ಹ್ಯಾಗಿದ್ರೂ ಚಿಕ್ಕ ಕೊಟ್ಟಿಗೆ ಇದೆ ; ಅದನ್ನು ಸ್ವಲ್ಪ ದೊಡ್ಡದು ಮಾಡಿಸೋದು ; ಹಣದ ಬಗ್ಗೆ ಚಿಂತೆಯಾಕೆ ? ವರದರಾಜ ಇದಾನೆ, ಖಂಡಿತು ಕರುಣಿಸುತ್ತಾನೆ. "

" ಅದು ನಡೆಯುವಂತಹ ಕೆಲಸವಲ್ಲ ಅಂತ ತೋರುತ್ತೆ " — ವೈದೇಹಿಯ ನುಡಿಯಲ್ಲಿ ಅನುಮಾನವಿತ್ತು

" ನೋಡು ವೈದೇಹಿ, ಶಾಸ್ತ್ರಾರ್ಥವನ್ನು ತಿಳಿದಿರೋ ನಾವೇ ಆಚರಣೆ ತರದೆ ಇದ್ರೆ ಹ್ಯಾಗೆ ? ಇದು ನಮ್ಮ ಕರ್ತವ್ಯ, ಅದನ್ನು ಮಾಡೋಣ ; ನೀನು ಗೋವಿನ ಮಹಿಮೆ ಕೇಳಿಲ್ವೆ ? "

" ಏನು ? "

" ಕೇಳು, ಒಂದು ಸಾರಿ ಬ್ರಹ್ಮ ಅಪೂರ್ವ ಸುಂದರಿಯನ್ನು ಸೃಷ್ಟಿ ಮಾಡ್ತಾನೆ ಅವಳಿಗೆ ಸರಿಯಾದ ವರ ಯಾರು ಅನ್ನೋದೇ ಗೊತ್ತಾಗೊಲ್ಲ ; ಕೊನೆಗೊಂದು ಪರೀಕ್ಷೆ ಇಡುತ್ತಾನೆ ; ಯಾರು ಬಹು ಬೇಗ ಭೂಪ್ರದಕ್ಷಣೆ ಮಾಡ್ಕೊಂಡ್ಬರ್ತಾರೊ ಅವರಿಗೆ ಅಪೂರ್ವ ಸುಂದರಿಯಾದ ಅಹಲ್ಯೆಯನ್ನು ಕೊಟ್ಟು ವಿವಾಹಮಾಡಲಾಗುತ್ತೆ ಎಂದು ಪ್ರಚುರ ಪಡಿಸಿದ ಇಂದ್ರಾದಿಗಳೆಲ್ಲರೂ ತಮ್ಮ ತಮ್ಮ ವಾಹನಗಳನ್ನೇರಿ ಬಹು ವೇಗದಿಂದ ಹೊರಟರು. ಈ ಮಧ್ಯೆ ನಾರದ ಮಹರ್ಷಿಗೆ ಏನಾದರೂ ಮಾಡಿ ಮೋಜು ನೋಡಬೆಕೆನ್ನಿಸಿತು. ಅದಕ್ಕಾಗಿಯೇ ಕಾಡಿನಲ್ಲಿ ಕುಳಿತು ತಪಸ್ಸು ಮಾಡ್ತಾ ಇದ್ದ ಗೌತಮರನ್ನು ವಿವಾಹಕ್ಕೆ ಒಡಂಬಡಿಸಿ, ಒಂದು ಪ್ರಸವಿಸುತ್ತಿರುವ ಗೋವನ್ನು ಗೌತಮರು ಪ್ರದಕ್ಷಿಣೆ ನಮಸ್ಕಾರ ಮಾಡುವಂತೆ ಹೇಳಿ, ಬ್ರಹ್ಮಲೋಕಕ್ಕೆ ವರೊಡನೆ ತೆರಳಿದರು. ಎಲ್ಲರಿಗಿನ್ನ ಮುನ್ನ ಅಲ್ಲಿಗೆ ಬಂದವರೆಂದರೆ ಗೌತಮರೇ. ನಾರದರು, ಗೌತಮರಿಗೆ ಅಹಲ್ಯೆಯನ್ನು ಕೊಟ್ಟು ವಿವಾಹಮಾಡಬೇಕೆಂದು ಬ್ರಹ್ಮನನ್ನು ತ್ವರೆಮಾಡಲು ಬ್ರಹ್ಮನು " ಅದು ಹೇಗೆ ಸಾಧ್ಯ " ವೆಂದನು ; ಆದಕ್ಕೆ ನಾರದರು " ಓ ಪಿತಾಮಹ, ಹಿಂದೊಂದು ಬಾರಿ ನೀನೇ ತಿಳಿಸಿರುವಂತೆ, ಪ್ರಸವಿಸುತ್ತಿರುವ ಗೋವನ್ನು ಪ್ರದಕ್ಷಿಣೆ ಮಾಡಿದರೆ ಭೂಪ್ರದಕ್ಷಿಣೆ ಮಾಡಿದಷ್ಟು ಫಲವೆಂದು ; ಈಗಲೂ ಗೌತಮರು ಅದೇ ರೀತಿ ಪ್ರದಕ್ಷಿಣೆ ಮಾಡಿದ್ದಾರೆ ; ಆದುದರಿಂದ ನೀನೀಗ ಗೌತಮ-ಅಹಲ್ಯೆಯರ ವಿವಾಹವನ್ನು ನೆರವೇರಿಸಿ ನೀನು ಕೊಟ್ಟ ಮಾತನ್ನು ಳಿಸಿಕೊ. ಎಂದನು ; ಬ್ರಹ್ಮನು ಮರುಮಾತನಾಡದೆ ಇಂದ್ರಾದಿ ದೇವತೆಗಳು ಬರುವ ಮುನ್ನ ಅವರಿರ್ವರ ವಿವಾಹವನ್ನು ನೆರವೇರಿಸಿದನು. ಮುಂದಿನ ಕಥೆ ನಿನಗೇ ಗೊತ್ತಿದೆ ? ಅದಿರಲಿ, ಗೋವಿನ ಮಹಿಮೆಯನ್ನು ನೋಡಿದೆಯೊ. ಚತುರ್ಮುಖ ಬ್ರಹ್ಮನೇ ಗೋವಿನ ಮಹಿಮೆಯನ್ನು ಆ ರೀತಿ ವರ್ಣಿಸಿರುವಾಗ ಇದನ್ನು ಅಲ್ಲಗಳಯಲಾಗದು. ಸರ್ವೇಶ್ವರನಾದ ಶ್ರೀಮನ್ನಾರಯಣನೇ ಗೋಪಾಲಕನಾಗಿ ಗೋಪಾಲಕನಾಗಿ ಗೋ ಸೇವೆ ಮಾಡಲಿಲ್ಲವೇ ? ಆದುದರಿಂದ ಇಂತಹ ಮಹಿಮೆಯುಳ್ಳ ಗೋವನ್ನು ಅಲಕ್ಷಿಸಿದರೆ ರೌರವ ನರಕ ಪ್ರಾಪ್ತಿಯಾಗುತ್ತೀತು ".

ಜೋಯಿಸರ ಮಾತನ್ನು ಕೇಳಿದ ಅವರ ಪತ್ನಿಯ ತಮ್ಮ ಸಂಪೂರ್ಣ ಒಪ್ಪಿಗೆಯನ್ನು ನೀಡಿ ತಮ್ಮ ಪತಿಯ ಪ್ರಯತ್ನ ಯಶಸ್ವಿಯಾಗಲೆಂದು ಸರ್ವೇಶ್ವರನಾದ ಆ ಗೋಪಾಲನನ್ನು ಬೇಡಿದಳು. [ಮುಂದುವರಿಯುವುದು

ದೇವರ ಮಹಿಮೆ

ಸರ್ವಾಂತರ್ಯಾಮಿಯಾದ ಈಶ್ವರನು ಪೂರ್ವ ಸಂಸ್ಕಾರಗಳಿಗನುಸಾರವಾಗಿ ಪ್ರಾಣಿಗಳ ಮೇಲೆ ತೋರಿದ ಅಗಾಧ ದಯೆಯ ಘಟನೆ ಬಸವಕಲ್ಯಾಣದಲ್ಲಿ ಜರುಗಿದ್ದರ ಪ್ರತ್ಯಕ್ಷ ಪ್ರಮಾಣಗಳೊಂದಿಗೆ ಘಟನೆಯನ್ನು ಪ್ರತ್ಯಕ್ಷ ನೋಡಿದವರಮುಖಾಂತರ ನಾನು ಕಲ್ಯಾಣದ ಪ್ರವಾಸಕ್ಕೆ ಹೋದಾಗ ತಿಳಿದು ಸಂಶೋಧಿಸಿದ ವಾಸ್ತವಿಕ ದೈವೀ ಅಂಶವನ್ನು ಓದುಗರ ಚಿಂತನೆಗಾಗಿ ವಿವರಿಸುತ್ತಿದ್ದೇನೆ.

ಬಸವ ಕಲ್ಯಾಣದ ಶ್ರೀ ಸಂಗಪ್ಪ ಚಂದನ ಕೇರಿ ಎಂಬ ಪರಿಣಾಮಸ್ಥರ ಒಕ್ಕಲುತನ ಸಲಗರ (ತಾ. ಆಳಂದ) ದಲ್ಲಿ ಕೂಡ ಇದ್ದು ಅಲ್ಲಿ ದೈವೀ ಪ್ರಕೋಪದಿಂದ ಉಂಟಾದ ನೀರು ಮತ್ತು ಕಣಿಕೆಯ ಅಭಾವದ ಕಾರಣ ದಿನಾಂಕ 18-10-72 ರಂದು ಸಲಗರದಲ್ಲಿಯ ಎತ್ತುಗಳನ್ನು ಕಲ್ಯಾಣಕ್ಕೆ ಬರಮಾಡಿಕೊಂಡರು : ಅವುಗಳನ್ನು ನೀರಿಗಾಗಿ ಕಲ್ಯಾಣದ ಹತ್ತಿರ ಇರುವ ತ್ರಿಪುರಾಂತಕೇಶ್ವರ ಕೆರೆಗೆ ಹೊಡೆದುಕೊಂಡು ಹೋಗಿ ಮರಳಿ ಮನೆಗೆ ಬರುವಾಗ ಒಂದು ದೊಡ್ಡ ಎತ್ತು ಸುಮಾರು ರೂ. 1000 ಬೆಲೆಯುಳ್ಳದ್ದು ಸರಿಯಾದ ಮೇವಿನ ಅಭಾವದ ಅಶಕ್ತತೆಯಿಂದ ನಡೆಯದಂತಾಯಿತು : ನಿಲ್ಲದೆ ಇತರ ಎತ್ತುಗಳು ಅದಕ್ಕೆ ಧಕ್ಕೆ ಕೊಟ್ಟಿದುದರಿಂದಲೋ ಏನೋ ಆದು ಬಸವೇಶ್ವರರ ಧ್ಯಾನದ " ಅರುವಿನ ಮನೆಯ " ಮುಂಭಾಗದ ರಸ್ತೆಯ ಮೇಲೆ ಬಿದ್ದು ಬಿಟ್ಟಿತು. ಮನೆಗೆ ತರಲು ಪ್ರಯತ್ನ ಪಟ್ಟರೂ ನಿಷ್ಫಲವಾಯಿತು ! ಆದುದರಿಂದ ಎತ್ತನ್ನು ಆಲ್ಲಿಯೇ ಬಿಟ್ಟು ಎರಡುದಿನಗಳತನಕ ಔಷಧೋಪಚಾರಮಾಡಿಸಿದರೂ ವಾಸಿಯಾಗುವ ಲಕ್ಷಣಗಳು ಕಾಣದ ಕಾರಣ ಎತ್ತು ಬದುಕುವದೆಂಬ ಆಸೆಯನ್ನು ತೊರೆದು ಶುಕ್ರವಾರ 20-10-72 ಸಾಯಂಕಾಲ ಎತ್ತನ್ನು ಕಟುಕರಿಗೆ ಮೂವತ್ತು ರೂಪಾಯಿಗಳಿಗೆ ಮಾರಲಾಯಿತು.

ಶ್ರೀ ಚಂದನಕೇರಿಯವರ ಮನೆತನದಲ್ಲಿ ಸತ್ತ ಎತ್ತುಗಳನ್ನು ಹುಗಿಯುವ ಪದ್ಧತಿ ಮಾತ್ರ ಇತ್ತು ; ಇವರು ಕಟುಕರಿಗೆ ಮಾರಿದುದು ಇದು ಮೊದಲನೆಯ ಸಲವಾಗಿತ್ತು. ಹೀಗಾಗಿ ಬಸವನು ತನ್ನ ಮಹಿಮೆಯನ್ನು ಜಗಕ್ಕೆ ತೋರಿಸಬೇಕೆಂಬ ದೈವೀ ಇಚ್ಛೆ ಇದ್ದಂತೆ ಅನಿಸುವದು. ಎತ್ತನ್ನು ಕೊಂಡ ಕಟುಕರು ಮರುದಿವಸ 21-10-72 ಸಾಯಂಕಾಲ ಅರುವಿನ ಮನೆಯ ರಸ್ತೆಯ ಮೇಲೆಯೇ ಕೊಯಬ್ಬೇಕೆಂದು ತೀರ್ಮಾನಿಸಿ ತಮ್ಮ ಸಲಕರಣೆಗಳೊಂದಿಗೆ ಬಂದರು ಅಷ್ಟರಲ್ಲಿ ಒಂದಷ್ಟು ಸರ್ಪವು ಎತ್ತಿನ ಕೊರಳನ್ನು ಸುತ್ತಿಕೊಂಡು ಎರಡು-ಕೋಡುಗಳ ಮಧ್ಯೆ ಹೆಣೆಯಂತೆ ಮೇಲೆ ಹೆಡೆ ಎತ್ತಿ ಬುಸುಗುಟ್ಟುತ್ತಿತ್ತು. ಮೊಟ್ಟಮೊದಲು ಕಟುಕರಿಗೆ ಸರ್ಪದ ಬುಸುಗುಟ್ಟುವ ಸಪ್ಪಳ ಕೇಳಿಬರುತ್ತಿದ್ದಾಗ್ಯೂ ಅದು ಎತ್ತಿನ ಸಪ್ಪಳವೆಂದು ಭಾವಿಸಿ ಹತ್ತಿರ ಹೋದಾಗ ಸರ್ಪವಿದ್ದದ್ದನ್ನು ಕಂಡು ಹೆದರಿ ಹಿಂದಕ್ಕೆ ಸರಿದು ದೂರ ಬಂದು ಕುಳಿತರು. ಅರುವಿನ ಮನೆಯ ಪೂಜಾರಿಯು ಎತ್ತಿನ ಸಮೀಪಕ್ಕೆ ಬಂದರೂ ಸರ್ಪವು ಆತನಿಗೆ ಕೆಣಕಲಿಲ್ಲ. ಆದರೆ ಕಟುಕರು ಹತ್ತಿರಕ್ಕೆ ಬಂದಾಗ ಮಾತ್ರ ಸರ್ಪವು ಸಿಟ್ಟಿನಿಂದ ಹೆಡೆ ಜಾಡಿಸಿ ಬುಸುಗುಟ್ಟುತ್ತಿತ್ತು. ಹೀಗಾಗಿ ಕಟುಕರು ನಿರುಪಾಯರಾಗಿ, ಎತ್ತನ್ನು ಬಿಟ್ಟು ಬಿಟ್ಟು ಪರಾರಿಯಾದರು ಸ್ವಲ್ಪ ಸಮಯ ನಂತರ ಸರ್ಪವು ಮಾಯವಾಯಿತು .... ಈಶ್ವರ ಕೃಪೆಯಿಂದ ಎತ್ತು ಗುಣಗೊಂಡಿತು.

ಶ್ರೀ ಆಯಲರೆಡ್ಡಿ ಪಾಟೀಲ ಸೇಡಂ [ವಿಶ್ವಕಲ್ಯಾಣ]

Turning the Wheel of Happiness

DALMIA CEMENT (BHARAT) LIMITED

Dalmiapuram P. O., Tiruchirapalli Distt

(Tamil Nadu)

Manufacturers of

'ROCKFORT' BRAND

DALMIA Portland Cement

ALSO

Mine-Owners & Suppliers of High Grade Iron Ore for Export

H. O: 4 Scindia House, New Delhi - 1.

ತ್ಯಾ ಗ ಮ ಯ !

ಹಾಲನು ನೀಡಲು ಅಂಬಾ ಎಂದಳು
ನಾಲಿಗೆ ಚಾಚುತ ನೆಕ್ಕುತಲಿ ॥

ಒಲುಮೆಯಿಂದಲೇ ಅಳು ನಿಂದಳು
ಬಾಲದಿ ಮೆಲ್ಲನೆ ತಾಕುತಲಿ ॥

ದಿನದಿನ ಜನಹಿತ ಬಯಸುವ ದೇವಿ
ನಮಿಸುವೆ ಪ್ರೇಮದಿ ಪೂಜಿಸುವೆ ॥

ನೀನೀಗೇತಕೆ ಕಂಬನಿ ಮಿಡುವೆ
ಕ್ಷಮಿಸೌ ತಾಯೆ ಪ್ರಾರ್ಥಿಸುವೆ ॥

ಜೀವನ ಯಜ್ಞಕೆ ಹೋಮಿಸೆ ಬಯಸಿ
ನೀನೇ ಜನತೆಯ ನೈವೇದ್ಯ ॥

ದೈವವೆ ಸೈರಿಸು ಹಾ! ಹಾ! ನಿಲ್ಲಿಸು
ಆಮ್ಮನ ನೆತ್ತರ ಬಿಡು ಸದ್ಯ ॥

ಭಾರತ ಸಂಸ್ಕೃತಿ ಹಿರಿಮೆಯ ಪ್ರತಿಮೆ
ಜ್ವಲಂತ್ವವಾಗಿದೆ ಗೋಪತ್ವ ॥

ಕೊರಳಿಗೆ ಕೈಯ್ಯೆ ? ಥೂಥೂ ಜನುಮ
ನಿಲುವುಡೆ ಭಾರತದಸ್ತಿತ್ವ ॥

ಪ್ರೇಮಶೃಂಗದ ಕೊನೆಯಲಿ ನಿಂತಿಹ
ಉಜ್ವಲದೀಪ್ತಿ ! ತ್ಯಾಗಮಯಿ !

ಅನುರವು ನಿನ್ನಯ ಕುಲಸಂದೋಹ
ಸಜ್ಜನರಾಗಿಸು ಓ ತಾಯಿ !

— ಎಸ್. ಆರ್. ಗಣಪತಿ ಶರ್ಮಾ
ವಜ್ರಳ್ಳಿ

★

ಸಿಂಹದ ಬದಲು ಹುಲಿ

ನವದೆಹಲಿ— 5 ವರ್ಷಗಳಿಂದ ಸಿಂಹವು ಭಾರತದ ರಾಷ್ಟ್ರ ಪ್ರಾಣಿಯಾಗಿತ್ತು — ಅದನ್ನು ಬದಲಿಸಿ ಹುಲಿಯನ್ನು ರಾಷ್ಟ್ರ ಪ್ರಾಣಿಯಾಗಿ ಮಾಡಲಾಗಿದೆ — ಕಾರಣ ಸಿಂಹವು ಗುಜರಾತಿನಲ್ಲಿ ಮಾತ್ರವಿದ್ದು, ಹುಲಿಯು ದೇಶದ ಅನೇಕ ಭಾಗಗಳಲ್ಲಿವೆ ಎಂದು ಈ ಸಂಬಂಧದ ಮಂಡಲಿ ಅಧ್ಯಕ್ಷ ಡಾ ॥ ಕರಣಸಿಂಗ್ ಹೇಳಿರುವರು.

ಗೋ ಮಾ ತೆ

ಗೋಮಾತೆ, ಜೀವನಕೆ, ಸುಖಶಾಂತಿ ದಾತೆ
ಗೋಮಾತೆ ದಿವ್ಯ ಚೇತನವೀವ ಮಾತೆ ॥
ಪರರ ಸುಖಕಾಗಿ ಬಾಳಿಹಳು ಆ ತಾಯಿ
ಸ್ವಾರ್ಥ ತೊರೆದಿಹ ಆಕೆಯನು, ನೀನೇ ತಾಯಿ ॥ 1 ॥

ಗುಡ್ಡ ಗಂಹ್ವರದಲ್ಲಿ ಚಲಿಸಿ ಜೀವನಕೆ
ತಿಂದು ನೀಡುವಳು ನಮಗೆ, ಚೇತನವನೀಕೆ ॥
ಪ್ರತಿ ನಿತ್ಯ, ಗೋಮಾತೆ, ಪೂಜಿಸುತ ನೀನು
ಬಾಳಿದರೆ ಆಗುವದು ಜೀವನವೇ ಜೇನು ॥ 2 ॥

ಮಲಮೂತ್ರ ಸಹಿತ ಪರಹಿತಕಾಗಿ ಕೊಟ್ಟು
ತನ್ನ ಮಗುವನು ದೇಶಸೇವೆಗೇನೇ ಬಿಟ್ಟು ॥
ಸುಖದುಃಖ್ಖಗಳ ಸಮತೆಯಲಿ ತಾ ಬಳಿವಳು
ಅನ್ಯತವ ನಮಗಿತ್ತು ರಕ್ಷಿಸಿಹಳಿಹಳು ॥ 3 ॥

ಹಿಂದೂ ಧರ್ಮಕೆ ಯೀಕೆ ಅತಿ ಪೂಜ್ಯಳಿಹಳು

ಪ್ರೀತಿ ನಿತ್ಯ ಸೇವಿಪಗೇ ಬಡತನವ ತರಳು ॥
ಹೇ ಮನುಜ ಗೋಮಾತೆ ರಕ್ಷಿಸುತ ಬಾಳೆ
ಪುತ್ರ ಪೌತ್ರಾದಿಗಳ ಕೊಡುತಿಹಳು ಕೇಳೊ ॥ 4 ॥

ಗೋಮಾತೆ ಜೀವನಕೆ ಸುಖ ಶಾಂತಿ ದಾತೆ
ಗೋಮಾತೆ ದಿವ್ಯ ಚೇತನವೀವ ಮಾತೆ ॥

— ಜಿ. ವ್ಹಿ. ಗಾಂವ್ಕರ, ಬಾಗಿನಕಟ್ಟಾ

10 ರೂ. ಗೆ ಎತ್ತುಗಳು !

ಕಲ್ಬುರ್ಗಿ— ಮೊದಲು 500 ರೂವರೆಗೂ ಮಾರಾಟವಾಗುತ್ತಿದ್ದ ಜೋಡೆತ್ತುಗಳನ್ನು ಈಗ 10 ರಿಂದ 50ರ ವರೆಗೆ ಮಾರಬೇಕಾಗಿದೆ ; ಆದರೂ ಗಿರಾಕಿಗಳು ಸಿಕ್ಕುತ್ತಿಲ್ಲ : ಕಟುಕರ ಅಂಗಡಿಗಳಲ್ಲಿ ಗೋಮಾಂಸ ಕೆಲೋಗೆ 35 ಪೈಸೆಗೆ ಇಳಿದಿದೆ ; ಆದರೆ ಕೊಂಡುಕೊಳ್ಳುವವರಿಲ್ಲ. ಹಸುಗಳನ್ನು 5 ರೂ. ಬೆಲೆಗೂ ಕೊಂಡುಕೊಳ್ಳುವವರಿಲ್ಲ. ಸರಕಾರ ಮೇವು ಕಳಹಿಸಿದ್ದ ಆಶ್ವಾಸನೆ ದಿ. 19 ರವರಗೂ ಸುಳ್ಳಾಗಿಯೇ ಉಳಿದಿದೆ ★ 1 ಸಾವಿರ ರೂ. ಬೆಲೆಯ ಉತ್ತಮ ಎತ್ತುಗಳನ್ನು ರೈತನೊಬ್ಬ ಕಟುಕರಿಗೆ ಕೊಡದೆ ಕೊಂಬುಗಳಿಗೆ ಚೀಟಿ ಬರೆದು ಶರಣ ಬಸವೇಶ್ವರನ ಪಾದಗಳಿಗೆ ಅರ್ಪಿಸಿದ್ದಾನೆ. ★ (ವಿಕ್ರಮ)

ಬಾ ಕನ್ನಡಿಗ

[ಶ್ರೀ ವಿಘ್ನೇಶ್ವರ.ಶರ್ಮಾ]

ಕರುನಾಡು ನೆಚ್ಚಿನ
ವರಕುವರ ನೀನು
ಬಾರಯ್ಯ, ಕಪಿಲೆಯ
ಕಗ್ಗೊಲೆಯ ತಡೆಯೈ
ಮಾರನಾ ಮಾಟಕ್ಕೂ
ಶೂರನಾ ಶೌರ್ಯಕ್ಕೂ
ಉರವೊಡ್ಡಿ ಜೈಯಿಸುವ
ಧೀರ ನರ ಬಾರೈ

ಕನ್ನಡಮ್ಮನ ಕರುಳ
ಕೆನ್ನೀರನಿಂಬೆಳದ
ಕನ್ನಡಿಗ ಕಾಪಾಡು
ನೀ ಧೇನು ತಾಯ
ಅನ್ನಹಾಲನ್ನಿತ್ತು
ನಿನ್ನ ಸಲುಹಿದ ತಾಯ್ಗೆ
ನಿನ್ನನಾಗುತನೀನು
ಧರ್ಮಪಥಕೇರು

ಹೊಂಬಣ್ಣದಾ ಹೊಗರು
ಹೊಂಬಪ್ಪ ಪಡುವಣದಿ
ಕಾಂಬ ಹೊಮ್ಮೈಬಣ್ಣ
ಹೆಚ್ಚುವಂತೆಸಗೈ
ಜಂಬಗಾರರ ಜೈಸಿ
ಮುಂಬಪ್ಪ ಒಸಗೆಯನು
ತುಂಬ ಬಾ, ನೀನೀಗ
ಕವಿನಾಡ ಕಲಿಯೇ

ಆಕಳಾ ದೀನಕರೆ
ನಾಕಕ್ಕೆ ಆಹ್ವಾನ
ಚಾಕಚಕ್ಯತೆಯಿಂದ
ಓಡಿ ಬಾ ನೀ
ಸಾಕಿನ್ನು ನಿರ್ದಯ
ಬಾಕು ತಿವಿತವು ಗೋವ್‌ಗೆ
ಲೋಕಮಂಗಳೆಯಾನ್ನು
ಕಾಯಯ್ಯ ಧೀರ

ಕಾಸಾಯಿಖಾನೆಗಳ
ಹಸು ದೊಡ್ಡಿಯೊಪ್ಪತೆ
ಕಸುವಿನಿಂ ಯತ್ನಿಸೈ
ಕನ್ನಡಮ್ಮನ ಕಳುಳೇ
ನಾಸಿಕಕೆ ಬಪ್ಪುದು
ವಾಸನೆಗಳು ತೊಡೆದು
ಕುಸುಮಗಳ ಸೌರಭವು
ಸೂಸುವಂತೆಸಗೈ

Cruelty to Animals

It is ironical that in this land of non-violence and Ahimsa we should not lead our citizens to be kind to dumb animals.

(Indian Express)

ಮೃಗರಾಜ ಸಿಂಹ

ಎಲ್ಲಾ ಸಿಂಹಗಳು ನರಭಕ್ಷಕವಲ್ಲ ; ಅವ್ವಸ್ಥ ಸಿಂಹಗಳು ಮಾತ್ರ ಎಂದು ಹೇಳುತ್ತಾರೆ ಧರ್ಮಕುಮಾರ ಸಿಂಹಜಿ. ಬಹುತೇಕ ಸಿಂಹಗಳು ಮಾನವನ ಪ್ರಚೋದನೆಯಿಂದಲೇ ಅವನ ಮೇಲೆರಗುತ್ತದೆಂದು ಅವರು ಹೇಳುತ್ತಾರೆ ; ಸಿಂಹವನ್ನು ದಯಾಗುಣದಿಂದ ಬೆಳೆಸಿದರೆ ಅದು ಮಾನವನ ಬಗ್ಗೆ ಗೌರವ ತೋರುವುದೆಂದೂ ಅವನ ಸಾಮರ್ಥ್ಯವನ್ನು ಕಂಡು ಅಂಜುವುದೆಂದೂ ಅವರು ಹೇಳಿದ್ದಾರೆ.

ಮಂತ್ರಿಪದವಿ ಹೋದರೆ ಗೋಪಾಲಕನಾಗುವೆ

ಬೆಂಗಳೂರಿನ ಕುರುಬರ ಸಂಘದ ಹೊಸ್ಸಿನ ಹಬ್ಬದ ಸಮಾರಂಭದಲ್ಲಿ ರಾಜ್ಯದ ಮುಖ್ಯ ಮಂತ್ರಿ ಶ್ರೀ ದೇವರಾಜ ಅರಸ್ ರವರು ಮಾತನಾಡುತ್ತಾ, ಮುಖ್ಯಮಂತ್ರಿ ಪದವಿ ಹೋದರೆ, ದನಕಾಯುವುದಕ್ಕೆ ಹೋಗುತ್ತೇನೆ ; ನಮ್ಮ ಅಜ್ಜ ಮುತ್ತಜ್ಜರ ಕಸುಬು ದನಕಾಯುವುದೇ ಆಗಿತ್ತು ; ದನಕಾಯುವ ಕೆಲಸ ಅಲ್ಪವೆಂದು ತಿಳಿದಿಲ್ಲ; ಯಾವ ಕೆಲಸವನ್ನೂ ಕೀಳು ಎಂದು ಭಾವಿಸಬಾರದು ; ದೇಹ ಶ್ರಮಪಡುವುದೆ ತಪಸ್ಸು ಎಂದರು. (ಮೈಸೂರು ಪತ್ರಿಕೆ)

ಹಸುಗಳು ಹೆಚ್ಚು ಹಾಲು ಕೊಡಲು

ಫೆಡರಾಲ್ ರಿಪಬ್ಲಿಕ್ ಜರ್ಮನಿಯ ಫ್ರೀಬರ್ಗ್‌ನ ಪ್ರಾಣಿ ಆರೋಗ್ಯ ವಿಭಾಗದಲ್ಲಿ ನಡೆಸಿದ ಪರಿಶೋಧನೆಗಳ ಫಲವಾಗಿ ಹಸುಗಳು ಪ್ರಶಾಂತವಾದ ಪರಿಸರದಲ್ಲಿದ್ದು ಸುಖವಾದ ವಾತಾವರಣವನ್ನು ಕಲ್ಪಿಸಿದಲ್ಲಿ ಅದು ಹಾಲು ಕೊಡುವ ಪ್ರಮಾಣವು ಹೆಚ್ಚಾಗಿರುವುದೆಂದು ಕಂಡುಹಿಡಿದಿದ್ದಾರೆ. (ಯು ಪಿ ಎಸ್)

ವುಡ್‌ಲಾಂಡ್ಸ್ 15 12 72 ರಿಂದ ಆಮೋಘ ಪ್ರಾರಂಭ

ಸೆರ್ವೆ ಆರ್ಟ್ಸ್ ಪಿಕ್ಚರ್ಸ್‌ರವರ ಹಿಂದಿ ವರ್ಣ ಚಿತ್ರ

ರಾ ಜಾ ಜಾ ನಿ

ಪ್ರತಿ ದಿನ 4 ಪ್ರದರ್ಶನಗಳು

ದಿನ ಬೆಳಿಗ್ಗೆ 10-30, ಮಧ್ಯಾಹ್ನ 2-45, ಸಂಜೆ 6-30, ರಾತ್ರಿ 9-45

ಪಾತ್ರ – ಧರ್ಮೇಂದ್ರ ಹೇಮಮಾಲಿನಿ ಪ್ರೇಂಚೋಪ್ರ ಪ್ರೇಂನಾಥ್
ಹೆಲ್ಪ ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್

ಸೂಚನೆ : ಬಾಲ್ಕನಿ ತರಗತಿಗಳಿಗೆ ದಿನ ಬೆಳಿಗ್ಗೆ 11-15 ರಿಂದ 12-15ರ ವರೆಗೆ ಮುಂಗಡ ಟಿಕೆಟ್ ಕೊಡಲಾಗುತ್ತದೆ

ಅಪೆರಾ 2 ನೇ ವಾರ

ಅತ್ಯಮೋಘ ಹಿಂದಿ ಕಲರ್ ಚಿತ್ರ

ಗಾಂವ್ ಹಮಾರ
ಷೆಹರ್ ತುಮಾರ

ಪಾತ್ರ : ರಾಜೇಂದ್ರ ಕುಮಾರ್ ರೇಖ ಸುಜಿತ ಕುಮಾರ್ ಲಲಿತಪವಾರ್
ಸಂಗೀತ – ಲಕ್ಷ್ಮೀಕಾಂತ್ ಪ್ಯಾರೇಲಾಲ್ ದಿನ 3 ಪ್ರದರ್ಶನಗಳು

ಭಾರತದಲ್ಲಿ ಗೋವಧೆ-
ಪೂರ್ಣ ನಿಷೇಧವಾಗಲಿ

Protect the Cow



Help The Gorakshana

— Humanitarian Propoganda Monthly....

Edited Printed and Published by Dharmapracharanirata M S Krishna Rao (Proprietor) at the Satvvadi Press, Chamarajapuram, Mysore 4

Bank Road Bahusar, A Fair Price Shop in Actual Practice